# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 78

ಮಾನ್ಯ ಸದಸ್ಯರ ಹೆಸರು : ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 13/02/2023

ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವರು

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಮನಗರ ಜಿಲ್ಲೆ, ಮಾಗಡಿ ಟೌನ್ ನಲ್ಲಿ ನಾಡಪ್ರಭು ಕೆಂಪೇಗೌಡರ ಕೋಟೆ ಜೀರ್ಣೋದ್ಧಾರ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಯಿತು; ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು; | ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯ ಅನುದಾನದಡಿ ಸರ್ಕಾರದ ಆದೇಶ ಸಂಖ್ಯೆ: ಪ್ರಇ/162/ಪ್ರವಾಯೋ-2013 ದಿನಾಂಕ:08/10/2013ರಲ್ಲಿ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಮಾಗಡಿಯಲ್ಲಿರುವ ಕೋಟೆಯ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ರೂ.486.79 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ ಹಾಗೂ ಮೊದಲ ಕಂತಾಗಿ ರೂ.389.43 ಲಕ್ಷಗಳನ್ನು ಆಯುಕ್ತರು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರುರವರಿಗೆ ಬಿಡುಗಡೆ ಮಾಡಲಾಗಿದೆ.<br><br>ಸದರಿ ಕಾಮಗಾರಿಗೆ ದಿನಾಂಕ:23/11/2013ರಂದು ತಾಂತ್ರಿಕ ಮಂಜೂರಾತಿಯನ್ನು ಪಡೆದು ಮಾಗಡಿ ಕೋಟೆಯ ಸಂರಕ್ಷಣೆಯನ್ನು (Site Development works) ಅಂದಾಜು ರೂ.291.17 ಲಕ್ಷಗಳ ವೆಚ್ಚದಲ್ಲಿ, ದಿನಾಂಕ:24.02.2014ರಂದು ಪ್ರಾರಂಭಿಸಿ ಕೋಟೆಯ ಉತ್ತರ ಭಾಗದ 138.50 ಮೀಟರ್ ಉದ್ದದ ಗೋಡೆಯ (5.5 ಮೀಟರ್ ಎತ್ತರಕ್ಕೆ) ಸಂರಕ್ಷಣೆಯನ್ನು ಹಾಗೂ ಪಶ್ಚಿಮ ಭಾಗದಲ್ಲಿ 166 ಮೀಟರ್ ಉದ್ದದ ಕೋಟೆಯ ಭಾಗವನ್ನು ಪೂರ್ಣಗೊಳಿಸಲಾಗಿದೆ. ಪೂರ್ವಭಾಗದಲ್ಲಿ 105 ಮೀಟರ್ ಗೋಡೆಯನ್ನು (3.2 ಮೀಟರ್ ಎತ್ತರಕ್ಕೆ) ಸಂರಕ್ಷಿಸಲಾಗಿದೆ. ಉತ್ತರಭಾಗದಲ್ಲಿ 89 ಮೀಟರ್ ಮಣ್ಣಿನ ಅಗತ ಹಾಗೂ ತಳಪಾಯವನ್ನು ಭದ್ರಪಡಿಸುವ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಎಂದು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರುರವರು ತಿಳಿಸಿರುತ್ತಾರೆ. |
| ಆ) | ಈ ಕೋಟೆ ಪೂರ್ಣಗೊಳಿಸಲು ತಡವಾಗುತ್ತಿರುವುದಕ್ಕೆ ಕಾರಣವೇನು; ಕಾಮಗಾರಿ ಪ್ರಗತಿ ಪ್ರಸ್ತುತ ಯಾವ ಹಂತದಲ್ಲಿದೆ; | ಮಾಗಡಿ ಕೋಟೆಯ ಒಟ್ಟಾರೆ ಉದ್ದ 1030 ಮೀಟರ್ ಇದ್ದು, ಇದರಲ್ಲಿ 528 ಮೀಟರ್‌ಗಳನ್ನು ಸಂರಕ್ಷಿಸಿ ಪೂರ್ಣಗೊಳಿಸಲಾಗಿರುತ್ತದೆ. ಪ್ರಸ್ತುತ ಬಾಕಿ ಉಳಿದಿರುವ 502 ಮೀಟರ್ ಕೋಟೆ ಗೋಡೆಯ ಸಂರಕ್ಷಣೆಗೆ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಿಂದ ಪ್ರಸ್ತಾವನೆ ಸ್ವೀಕೃತಗೊಂಡಲ್ಲಿ, ಆಯವ್ಯಯದಲ್ಲಿ ಇಲಾಖೆಗೆ ಒದಗಿಸುವ ಅನುದಾನದ ಲಭ್ಯತೆಗನುಗುಣವಾಗಿ ನಿಯಮಾನುಸಾರ ಪರಿಶೀಲಿಸಲಾಗುವುದು. |
| ಇ) | ಇದನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಇನ್ನು ಎಷ್ಟು ಸಮಯ ಬೇಕಾಗಿದೆ (ವಿವರ ನೀಡುವುದು) | |

ಸಂಖ್ಯೆ: ಟಿಒಆರ್ 32 ಟಿಡಿವಿ 2023

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವರು